ಆ) ರಾಜ್ಯದಲ್ಲಿ 2,11,93,800 ಮತದಾರರಿಗೆ ಗುರುತಿನ ಚೀಟಿಯನ್ನು ನೀಡಬೇಕಾಗಿದೆ.

ಇ) ಇದುವರೆಪಿಗೂ 38,12,897 ಮತದಾರರಿಗೆ ಗುರುತಿನ ಚೀಟಿಗಳನ್ನು ವಿತರಿಸಲಾಗಿದೆ, ಜಿಲ್ಲಾ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ದಿನಾಂಕ : 31-3-1996 ರೊಳಗೆ ಗುರುತಿನ ಚೀಟಿ ನೀಡುವಿಕೆಯ ಕಾರ್ಯ ಮುಗಿಯಬೇಕಾಗಿದೆ, ಈ ಅವಧಿಯೊಳಗೆ ಗುರುತಿನ ಚೀಟಿ ನೀಡುವ ಎಲ್ಲ ಕ್ರಮವನ್ನು ತೆಗೆದುಕೊಳ್ಳಲಾಗುವುದು.

**ಅನುಬಂಧ**

| ಕ್ರಮ ಸಂಖ್ಯೆ | ಜಿಲ್ಲೆ | ಮತದಾರರಿಗೆ ಗುರುತಿನ ಚೀಟಿ ವಿತರಣೆ ಮಾಡಿದ ಸಂಖ್ಯೆ |
|---|---|---|
| 1) | ರಾಯಚೂರು | 66,137 |
| 2) | ಚಿತ್ರದುರ್ಗ | 40,00 |
| 3) | ಬೆಂಗಳೂರು ಮಹಾನಗರ ಪಾಲಿಕೆ | 92,504 |
| 4) | ಬೆಂಗಳೂರು ಗ್ರಾಮಾಂತರ | 7,090 |
| 5) | ಮಂಡ್ಯ | 74,09,551 |
| 6) | ಮೈಸೂರು | 12,15,442 |
| 7) | ದಕ್ಷಿಣ ಕನ್ನಡ | 2,16,453 |
| 8) | ಉತ್ತರ ಕನ್ನಡ | 2,99,314 |
| 9) | ಧಾರವಾಡ | 70,705 |
| 10) | ಬೆಳಗಾವಿ | 10,55,701 |
| | ಒಟ್ಟು | **38,12,897** |

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಕ್ಕಾಗಿ ಬಂದ ಅರ್ಜಿಗಳ ಸಂಖ್ಯೆ**

719 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಹಾಗೂ ಮ್ಹೈ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು ?

ಅ) ಪ್ರಾಧಿಕಾರದಲ್ಲಿ ವಿಲೇವಾರಿಗಾಗಿ ಬಾಕಿ ಇರುವ ನಿವೇಶನಗಳು ಎಷ್ಟು? ಎಷ್ಟು ವರ್ಷಗಳಿಂದ ಬಾಕಿ ಇವೆ;

ಇ) ಬಾಕಿ ಉಳಿದಿರುವ ನಿವೇಶನಗಳನ್ನು ಯಾವಾಗ ಅರ್ಜಿ ಸಲ್ಲಿಸಿರುವವರಿಗೆ ಕೊಡಲಾಗುವುದು ವಿವರ ನೀಡುವುದು.

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಪಕ್ಷ ರಾಜ್ಯ ಸಚಿವರು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಕ್ಟೋಬರ್ 1988ರಲ್ಲಿ ವಿವಿಧ ಅಳತೆಯ 3200 ನಿವೇಶನಗಳ ಹಂಚಿಕೆಗಾಗಿ ಅರ್ಜಿಗಳನ್ನು ಆಹ್ವಾನಿಸಿದ ಮೇರೆಗೆ 81,843 ಅರ್ಜಿಗಳನ್ನು ಸಾರ್ವಜನಿಕರಿಂದ ಸ್ವೀಕರಿಸಿರುತ್ತದೆ. ಅಲ್ಲದೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಡಾ: ಬಿ.ಆರ್. ಅಂಬೇಡ್ಕರ್ ಜನ್ಮಶತಾಬ್ದಿ ಅಂಗವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನಿರ್ದಿಷ್ಟಪಡಿಸಿ 20X30 ವಿಸ್ತೀರ್ಣದ 2000 ನಿವೇಶನಗಳ ಹಂಚಿಕೆಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು (ಡಿಸೆಂಬರ್ 1988ರಲ್ಲಿ) ಇದರ ಮೇರೆಗೆ, 5,145 ಅರ್ಜಿಗಳನ್ನು ಸ್ವೀಕರಿಸಿರುತ್ತದೆ.

ಹೀಗೆ ಸಾರ್ವಜನಿಕರಿಂದ ಒಟ್ಟು 86,988 ಅರ್ಜಿಗಳನ್ನು ನಿವೇಶನಗಳ ಹಂಚಿಕೆಗಾಗಿ ಸ್ವೀಕರಿಸಲಾಗಿರುತ್ತದೆ.

ಆ) 1988ರ ಅಧಿಸೂಚನೆ ಮೇರೆಗೆ ಹಂಚಿಕೆ ಮಾಡಬೇಕಾಗಿದ್ದ 3,200 ನಿವೇಶನಗಳ ಪೈಕಿ 1534 ನಿವೇಶನಗಳನ್ನು ಡಿಸೆಂಬರ್ 1994ರಲ್ಲಿ ವಿತರಿಸಲಾಗಿದೆ. 152 ಪ್ರಕರಣಗಳಲ್ಲಿ ನ್ಯಾಯಾಲಯದ ತಡೆಯಾಜ್ಞೆಯಾಗೂ ಅನಧಿಕೃತ ಕಟ್ಟಡ, ಇವುಗಳಿಂದಾಗಿ 94-95ರ ಸಾಲಿನಲ್ಲಿ ಬದಲೀ ನಿವೇಶನವನ್ನು ನೀಡಲಾಗಿದೆ.

ಬಡಾವಣೆ: ನಿವೇಶನಗಳನ್ನು ನಿರ್ಮಾಣಕ್ಕಾಗಿ ಭೂಸ್ವಾಧೀನ ಗೊಳಿಸಿಕೊಂಡ ಜಮೀನಿನ ಲಭ್ಯತೆಯ ಆಧಾರದ ಮೇಲೆ ಅರ್ಜಿದಾರರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿವೇಶನ ಹಂಚಿಲು ಅವಲಂಬಿತವಾಗಿರುತ್ತದೆ. ಇತ್ತೀಚೆಗೆ ಬಾಕಿ ಇರುವ ಮೊಕದ್ದಮೆಗಳು ಮತ್ತು ಸ್ವಾಧೀನ ಪಡಿಸಿಕೊಂಡ, ಜಮೀನಿನ ಒತ್ತುವರಿಯ ಕಾರಣದಿಂದಾಗಿ, ಭೂಸ್ವಾಧೀನವು ಕಷ್ಟಕರವಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ (95-96) ಹಂಚಿಕೆಗಾಗಿ ಬಾಕಿ ಇರುವ ಅರ್ಜಿದಾರರಿಗೆ 550 ನಿವೇಶನಗಳನ್ನು ಹಂಚಿಕೆ ಮಾಡಲು ಅಂದಾಜು ಮಾಡಲಾಗಿದೆ.

ಇ) ಅಕ್ಟೋಬರ್ 1988ರ ಪ್ರಕರಣ ಮೇರೆಗೆ ಬಾಕಿ ಇರುವ 1666 ನಿವೇಶನ ಮತ್ತು ಡಾ: ಬಿ.ಆರ್. ಅಂಬೇಡ್ಕರ್ ಜನ್ಮ ಶತಾಬ್ದಿಯದಿಯಲ್ಲಿನ 2000 ನಿವೇಶನಗಳ ಶೀಘ್ರ ವಿತರಣೆಗೆ ಪ್ರಯತ್ನಿಸಲಾಗುತ್ತಿದೆ.

**ಕೆ.ಎಫ್. ಡಬ್ಲ್ಯೂ ಯೋಜನೆಯ ಮಂಜೂರಾತಿ.**

720 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?